# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟದೆ)
ನೊಂದಾಯಿತ ವಿಳಾಸ : ನಿಗಮ ಕಾರ್ಯಾಲಯ, ನಂ. 29, ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು-570017

ದೂರವಾಣಿ ಕಛೇರಿ : 08226-238025
ಇ ಮೇಲ್ : aeeh.hally@gmail.com
ಇ ಮೇಲ್ : hsd sa@radiffmail.com

ಕಛೇರಿ ವಿಳಾಸ :
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ).
ಕಾರ್ಯ ಮತ್ತು ಪಾಲನಾ ಉಪ-ವಿಭಾಗ
ಚಾ.ವಿ.ಸ.ನಿ.ನಿ., ಹರದನಹಳ್ಳಿ-571127

ಕ್ರಮ ಸಂಖ್ಯೆ: ಸ.ಕಾ.ನಿ.ಇಂ.(ವಿ)/ಸ.ಇಂ(ತಾ)/ಹಿ.ಸ/ಹ.ಹಳ್ಳಿ/19-20/ 881 ದಿನಾಂಕ: 06-01-20

## ಸಭೆಯ ನಡಾವಳಿಗಳು

ದಿನಾಂಕ 27.12.2019 ರಂದು ಹರದನಹಳ್ಳಿ ಉಪವಿಭಾಗ ಕಛೇರಿಯಲ್ಲಿ ಕಾರ್ಯ ನಿರ್ವಾಹಕ ಇಂಜಿನಿಯರ್ ಚಾ.ವಿ.ಸ.ನಿ.ನಿ. ಚಾಮರಾಜನಗರ ವಿಭಾ ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ ಪೂರ್ಣಚಂದ್ರ ತೇಜಸ್ವಿ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾಮರಾಜನಗರ ವಿಭಾಗೀಯ ಕಛೇರಿ.
2. ಶ್ರೀ ಆಶಿಶ್ ಕೆ ಪೀಟರ್ : ಪ್ರಭಾರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹರದನಹಳ್ಳಿ ಉಪವಿಭಾಗ
3. ಶ್ರೀ.ವಸಂತ್‌ಕುಮಾರ್ : ಕಿರಿಯ ಇಂಜಿನಿಯರ್(ವಿ), ಹರದನಹಳ್ಳಿ ಶಾಖೆ.
4. ಶ್ರೀ.ಮಹದೇವಸ್ವಾಮಿ : ಕಿರಿಯ ಇಂಜಿನಿಯರ್(ವಿ), ಅರಕಲವಾಡಿ ಶಾಖೆ.
5. ಶ್ರೀ. ಪ್ರವೀಣ್ ಕೆ ಬಿ : ಕಿರಿಯ ಇಂಜಿನಿಯರ್(ವಿ), ಹರವೆ ಶಾಖೆ.
6. ಶ್ರೀ. ಸಿದ್ದನಗೌಡ ಉಗ್ರಾಣ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಉಡಿಗಾಲ ಶಾಖೆ.
7. ಶ್ರೀ. ತಿಮ್ಮರಾಜು. ಟಿ : ಹಿರಿಯ ಸಹಾಯಕ ಹರದನಹಳ್ಳಿ ಉಪವಿಭಾಗ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಗೆ ಹಾಜರಾದ ಎಲ್ಲರನ್ನು ಸ್ವಾಗತಿಸಿ ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ ರವರ ಸಭೆಯ ನಡೆಸಿಕೊಡುವಂತೆ ಕೋರಿದರು. ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ ರವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರ ಆಯೋಗದ ನಿರ್ದೇಶನದಂತೆ ಎಲ್ಲಾ ಉಪವಿಭಾಗ ವ್ಯಾಪ್ತಿಯಲ್ಲಿ ಮೂರು ತಿಂಗಳಿಗೊಮ್ಮೆ ಕಾರ್ಯ ನಿರ್ವಾಹಕ ಇಂಜಿನಿಯರ್ ಅಧ್ಯಕ್ಷತೆಯಲ್ಲಿ ಸ್ಥಳೀಯ ಅಧಿಕಾರಿಗಳನ್ನೊಳಗೊಂಡಂತೆ ಗ್ರಾಹಕರ ಸಭೆ ಕರೆದು ಅಹವಾಲುಗಳನ್ನು ಸ್ವೀಕರಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಈ ಸಭೆಯನ್ನು ನಡೆಸಲಾಗುತ್ತಿದ ವಿದ್ಯುತ್ ಸರಬರಾಜು, ನಿರ್ವಹಣೆ ಹಾಗು ಇನ್ನಿತರ ಸಮಸ್ಯೆಗಳ ಬಗ್ಗೆ ತಮ್ಮ ಅಹವಾಲುಗಳನ್ನು ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ಸಭೆಗೆ ಮಂಡಿಸುವಂ ಕೋರಿದರು ಹಾಗು ಸದರಿ ಸಮಸ್ಯೆಗಳಿಗೆ ಆಧ್ಯತೆ ಮೇಲೆ ಸಮಸ್ಯೆಗಳ ಪರಿಹಾರಕ್ಕಾಗಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

| ಕ್ರ.ಸಂ | ಸಲಹೆ/ದೂರುಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಸಲಹೆ/ದೂರುಗಳಿಗೆ ಉತ್ತರ |
|---|---|---|---|
| 01 | ಶ್ರೀ ಸಿದ್ದರಾಜು, ಶಿವನಂಜಯ್ಯ ಕೆಂಪಣ್ಣ ರಾಜು ದೊಡ್ಡಹಳ್ಳ(ಕೋಡಿಉಗನೇ) ದೂರವಾಣಿ ಸಂಖ್ಯೆ: 9731366494 | ಪರಿವರ್ತಕವು ವಿಫಲವಾಗಿದ್ದು ಸದರಿ ಪರಿವರ್ತಕವನ್ನು ಬದಲಾಯಿಸಿಕೊಡುವಂತೆ ಮನವಿ ಮಾಡಿದರು. | ಇದಕ್ಕೆ ಉತ್ತರಿಸಿದ ಸಭೆಯ ಅದ್ಯಕ್ಷರಾದ ಕಾಯ ನಿರ್ವಾಹಕ ಇಂಜಿನಿಯರ್‌ರವರು ಪರಿವರ್ತಕವ ಬದಲಯಿಸುವಂತೆ ಶಾಖಾಧಿಕಾರಿಯವರ ಸೂಚಿಸಿದರು. |
| 02 | ಶ್ರೀ ಶಶಿಕಲಾ, ಅಟ್ಟುಗುಳಿಪುರ ದೂರವಾಣಿ ಸಂಖ್ಯೆ:8762063133 | ತಮ್ಮ ಮನೆಯ ಮೇಲೆ ಹಾದುಹೋಗಿರುವ 11ಕೆವಿ ಮಾರ್ಗವನ್ನು ಸ್ಥಳಾಂತರಿಸುವಂತೆ ಮನವಿ ಮಾಡಿದರು. | ಇದಕ್ಕೆ ಉತ್ತರಿಸಿದ ಸಭೆಯ ಅದ್ಯಕ್ಷರಾದ ಕಾಯ ನಿರ್ವಾಹಕ ಇಂಜಿನಿಯರ್‌ರವರು 11ಕೆ. ಮಾರ್ಗವನ್ನು ಸ್ವಯಂ ಕಾರ್ಯನಿರ್ವಹಣೆಯಡಿಯ ಅಥವಾ ಗ್ರಾಮ ಪಂಚಾಯಿತಿ ವತಿಯಿಂ ಮಾರ್ಗವನ್ನು ಸ್ಥಳಾಂತರಿಸುವಂತೆ ಗ್ರಾಹಕರ ಸೂಚಿಸಿದರು. |

ಪ್ರಭಾರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಆದ ಶ್ರೀ. ಆಶಿಶ್ ಕೆ ಪೀಟರ್ ರವರು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸು ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಇಂತಿ ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ., ಉಪ-ವಿಭಾಗ, ಹರದನಹಳ್ಳಿ